# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 71 ಪ್ರಾ.ಸಾ. :52**

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ್ ಎಸ್. ಜಾಬಿ |
| ತಂದೆಯ ಹೆಸರು | : | ಸಿದ್ಧಪ್ಪ ಜಾಬಿ |
| ವಯಸ್ಸು | : | 65 ವರ್ಷ |
| ಕೆಲಸ | : | ನಿವೃತ್ತ ಪರ್ಯಾಯ ನೋಡಲ್ ಆಫೀಸರ್,<br>ಬಿ.ಎಸ್.ಎನ್.ಎಲ್. ಬೆಂಗಳೂರು |
| ವಾಸ | : | ಹುಬ್ಬಳ್ಳಿ |

**ದಿನಾಂಕಃ 27-11-2025 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ನಾನು ಡಿಸೆಂಬರ್ 2015 ರಿಂದ ಮೇ 2019 ರವರೆಗೆ ನಾನು ಬಿ.ಎಸ್.ಎನ್.ಎಲ್. ಸಂಸ್ಥೆಯಲ್ಲಿ ಪರ್ಯಾಯ ನೋಡಲ್ ಆಫೀಸರ್ ಆಗಿ ಕರ್ನಾಟಕ ರಾಜ್ಯಕ್ಕೆ ಸೇವೆ ಸಲ್ಲಿಸಿರುತ್ತೇನೆ. ಯಾವುದೇ ಆಪರಾಧಿಕ ಪ್ರಕರಣಗಳಲ್ಲಿ, ಪೊಲೀಸರು ಸಿ.ಡಿ.ಆರ್ ಹಾಗೂ ಗ್ರಾಹಕರಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಳಿದ್ದಲ್ಲಿ, ಅವುಗಳನ್ನು ನೀಡುವ ಅಧಿಕಾರ ನನಗೆ ಇರುತ್ತದೆ.

2. ನಮ್ಮ ನಿಗಮಕ್ಕೆ ಸಂಬಂಧಿಸಿದ ಎಲ್ಲಾ ಗ್ರಾಹಕರ ಸಂಪೂರ್ಣ ದಾಖಲೆಗಳು (ಸಿ.ಎ.ಎಫ್) ಆಯಾ ಜಿಲ್ಲೆಯಲ್ಲಿ ಹಾಗೂ ಸಿ.ಡಿ.ಆರ್.ಗಳು ತಮಿಳುನಾಡಿನ ತಿರುಚ್ಚಿಯ ಬಿ.ಎಸ್.ಎನ್.ಎಲ್. ಸಂಸ್ಥೆಯ ಬಿಲ್ಲಿಂಗ್ ಸೆಂಟರಿನಲ್ಲಿ ಸಿಗುತ್ತವೆ. ಸಾಮಾನ್ಯವಾಗಿ ಬಿ.ಎಸ್.ಎನ್.ಎಲ್. ಸಂಸ್ಥೆಯ ಸಿಮ್ ಬೇಕಿದ್ದಲ್ಲಿ, ಗ್ರಾಹಕರು ತಮ್ಮ ಅರ್ಜಿಯ ಜೊತೆಗೆ ಆಧಾರ ಕಾರ್ಡ್ ಹಾಗೂ ಫೋಟೊ ನೀಡಬೇಕಾಗುತ್ತದೆ. ಸಿಮ್ ಪಡೆದು, ಅದನ್ನು ಮೊಬೈಲಿಗೆ ಅಳವಡಿಸಿದ ನಂತರ ಸದರಿ ನಂಬರಿನಿಂದ ಯಾವುದೇ ಕರೆಗಳು ಮಾಡಿದ್ದಲ್ಲಿ ಅಥವಾ ಯಾವುದೇ ಕರೆಗಳು ಬಂದಲ್ಲಿ, ಅಂದರೆ, ಸಿ.ಡಿ.ಆರ್. ಮಾಹಿತಿಯು ನಮ್ಮ ಬಿಲ್ಲಿಂಗ್ ಸಂಟರಿನಲ್ಲಿ ಸಿಗುತ್ತದೆ.

3. ದಿ.16-01-2019 ರಂದು ಕಾರವಾರದ ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಒಂದು ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ನಮೂದಿಸಿದ ಬಿ.ಎಸ್.ಎನ್.ಎಲ್. ನಂಬರುಗಳ ಮಾಹಿತಿ, ಅವಧಿ, ಸಿ.ಡಿ.ಆರ್ ಮತ್ತು ಸಿ.ಎ.ಎಫ್ (customer application form) ಗಳನ್ನು 65-ಬಿ ಪ್ರಮಾಣ ಪತ್ರದೊಂದಿಗೆ ನೀಡುವಂತೆ ಕೋರಿರುತ್ತಾರೆ. ಅದರಂತೆ ನಾನು ಕೋರಿಕೆ ಪತ್ರದಲ್ಲಿ ನಮೂದಿಸಿದ ನಂಬರುಗಳಿಗೆ ಸಿ.ಎ.ಎಫ್.ಗಳ ದೃಢೀಕೃತ ಪ್ರತಿಗಳನ್ನು ಆಯಾ ಜಿಲ್ಲೆಗಳಿಂದ ಪಡೆದುಕೊಂಡು ಹಾಗೂ ಸಿ.ಡಿ.ಆರ್. ನ್ನು ಬಿ.ಎಸ್.ಎನ್.ಎಲ್. ಸರ್ವರ್ ನಿಂದ ಡೌನ್‌ಲೋಡ್ ಮಾಡಿ, ಅವುಗಳನ್ನು ಸಿ.ಡಿ.ಯಲ್ಲಿ ಹಾಕಿ, ನಂತರ ಸಿ.ಎ.ಎಫ್. ಗಳ ದೃಢೀಕರಿಸಿದ ಪ್ರತಿಗಳನ್ನು, ಸಿ.ಡಿಯನ್ನು ಮತ್ತು 65-ಬಿ ಪ್ರಮಾಣ ಪತ್ರವನ್ನು ಪೊಲೀಸ್ ಸಿಬ್ಬಂದಿಗೆ ನೀಡಿರುತ್ತೇನೆ. ನಾನು ನೀಡಿದ ಮೊಬೈಲ್ ನಂಬರುಗಳ ಮಾಹಿತಿಯು ಈ ಕೆಳಗಿನಂತೆ ಇರುತ್ತದೆ.

| Sl. No. | Mobile Number | CDR period | Total Number of records |
|---|---|---|---|
| 1 | 9449348594 | 01-Sep-18 to 21-Oct-18 | 938 |
| 2 | 9483665917 | 01-Sep-18 to 21-Oct-18 | 381 |
| 3 | 9449253929 | 01-Sep-18 to 21-Oct-18 | 2696 |
| 4 | 8277225005 | 01-Sep-18 to 21-Oct-18 | 2125 |

ಸಾಕ್ಷಿಯು ತಾನು ನೀಡಿದ 65-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-129 ಎಂದು, ಸಾಕ್ಷಿಯ ಸಹಿಯನ್ನು ನಿಪಿ-129(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ನಾಲ್ಕೂ ನಂಬರುಗಳ ಸಿ.ಎ.ಎಫ್.ಗಳ ದೃಢೀಕೃತ ಪ್ರತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳ ಪ್ರತಿ ಪುಟಗಳನ್ನು ನಿಪಿ-129/1 ರಿಂದ ನಿಪಿ-129/23 ಎಂದು ಗುರುತಿಸಲಾಯಿತು. ಅದೇ ರೀತಿ, ಸಿ.ಡಿ.ಆರ್.ಗೆ ಸಂಬಂಧಿಸಿದ ಸಿ.ಡಿ.ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-129/24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-129/24(ಎ) ಎಂದು ಗುರುತಿಸಲಾಯಿತು. ದಾಖಲೆಯಲ್ಲಿ ನೀಡಿದ ಎಲ್ಲಾ ವಿವರಗಳು ನೈಜವಾಗಿರುತ್ತದೆ ಹಾಗೂ ನೈಜವಾಗಿದೆ ಎಂದು 65-ಬಿ ಪ್ರಮಾಣ ಪತ್ರವನ್ನೂ ನೀಡಿದ್ದೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ಸಿ.ಡಿ.ಆರ್. ಗಳನ್ನು ಪಡೆಯುವ ಸಂಬಂಧವಾಗಿ, ತರಬೇತಿಯನ್ನು ಪಡೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು, ತರಬೇತಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ಯಾವುದೇ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. 65–ಬಿ ಪ್ರಮಾಣ ಪತ್ರದಲ್ಲಿ ಯಾವ ಕಂಪ್ಯೂಟರನ್ನು ಬಳಸಿ ಸಿ.ಡಿ.ಆರ್.ಗಳನ್ನು ಡೌನ್‌ಲೋಡ್ ಮಾಡಿರುತ್ತೇನೆ ಹಾಗೂ ಅದನ್ನು ಮಾನಿಟರಿಂಗ್ ಮಾಡುತ್ತಿದ್ದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಿ.ಡಿ.ಆರ್. ನ್ನು ಪಡೆಯಲು ಬಳಸಿದ ಪದ್ಧತಿಯನ್ನು ನಮೂದಿಸಿಲ್ಲ ಎಂದರೆ ಸರಿ. ಯಾವುದೇ ಒಂದು ಕಂಪ್ಯೂಟರಿನ ಸರ್ವರನ್ನು ಗುರುತಿಸಲು ಅದರ location area code (LAC), mobile country code (MCC), mobile network code (MNC) ರ ಮೂಲಕ ಕಂಡುಹಿಡಿಯಲಾಗುತ್ತದೆ ಎಂದರೆ ಸಾಕ್ಷಿಯು ಐ.ಪಿ. ಅಡ್ರೆಸ್ (internet protocol) ನ ಮೂಲಕ ಕಂಡುಹಿಡಿಯಲಾಗುತ್ತದೆ ಎಂದು ನುಡಿಯುತ್ತಾರೆ. ನಾನು ನೀಡಿರುವ ನಿಪಿ–129 ರಲ್ಲಿ ಸರ್ವರನ್ನು ಗುರುತಿಸಲು ಮೇಲಿನ ಯಾವುದೇ ಗುರುತನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ–129 ರಲ್ಲಿ ಸಿ.ಡಿ.ಆರ್.ನ್ನು ಯಾವ ದಿನದಂದು ಪಡೆದುಕೊಂಡಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ–129/24 ಸಿ.ಡಿಯ ಮೇಲೆ ನಮ್ಮ ಸಂಸ್ಥೆಯ ಸೀಲು (rubber stamp) ಇರುವುದಿಲ್ಲ ಎಂದರೆ ಸರಿ. ನಾನು ನೀಡಿದ 65–ಬಿ ಪ್ರಮಾಣ ಪತ್ರವು ನಿಯಮಾನುಸಾರ ಇರುವುದಿಲ್ಲ ಎಂದರೆ ಸಾಕ್ಷಿಯು, ನನ್ನ ಮೊದಲಿನ ಅಧಿಕಾರಿಗಳು ನೀಡಿದ ನಮೂನೆಯಲ್ಲಿಯೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಿ.ಡಿ.ಆರ್. ಗಳನ್ನು ಹಾಗೂ 65–ಬಿ ಪ್ರಮಾಣ ಪತ್ರಗಳನ್ನು ಪೊಲೀಸರಿಗೆ ಅನುಕೂಲವಾಗುವಂತೆ ಸೃಷ್ಟಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

2 ಮತ್ತು 3 ನೇ ಆರೋಪಿತರ ಪರ ವಕೀಲರು ಈ ದಿನ ನ್ಯಾಯಾಲಯದಲ್ಲಿ ಹಾಜರಿಲ್ಲದ ಕಾರಣ, 2 ಮತ್ತು 3 ನೇ ಆರೋಪಿತರು ಸ್ವತಃ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀಮತಿ ಎಸ್.ಎಸ್.ಜಿ. ವಕೀಲರಿಂದಃ-</u>**

1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ-</u>**

1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.